# ವಿಶ್ವದಾಖಲೆಯ ಬಾಕ್ಸರ್

ಫ್ಲಾಯ್ಡ್ ಜಾಯ್ ಮೇವೆದರ್– ಜಗತ್ತಿನ ಅತ್ಯಂತ ಶ್ರೀಮಂತ ಕ್ರೀಡಾಳು. 38ರ ಹರೆಯದ ವಿಶ್ವ ಬಾಕ್ಸಿಂಗ್ ಚಾಂಪಿಯನ್ ಫ್ಲಾಯ್ಡ್ ಮೇವೆದರ್ ಜೂನಿಯರ್ (ಬಾಕ್ಸಿಂಗ್ ಪಟುವಾಗಿದ್ದ ಈತನ ಅಪ್ಪ ಮೇವೆದರ್ ಸೀನಿಯರ್!) ಈ ಒಂದೇ ವರ್ಷದಲ್ಲಿ ಗಳಿಸಿದ 30 ಲಕ್ಷ ಕೋಟಿ ಡಾಲರ್ ಆದಾಯ– ಈತನನ್ನು ಜಗತ್ತಿನ ಅತಿ ದೊಡ್ಡ ಶ್ರೀಮಂತ ಕ್ರೀಡಾಪಟುವನ್ನಾಗಿಸಿದೆ. 2008ರಲ್ಲಿ 'ವಿಶ್ವ ಗಾಲ್ಫ್ ಚಾಂಪಿಯನ್' ಟೈಗರ್ ವುಡ್ಸ್ ಹೀಗೆಯೇ ಹಣ ಗಳಿಕೆಯಲ್ಲಿ ವಿಶ್ವದಾಖಲೆ ಮಾಡಿದ್ದ. ಆ ವರ್ಷ ಆತ ಗಳಿಸಿದ್ದು 11.50 ಕೋಟಿ ಡಾಲರ್ ಆದಾಯ. ಆದರೆ ಆ ದಾಖಲೆಯನ್ನು ಮೇವೆದರ್ ಜೂನಿಯರ್ ಮುರಿದಿಕ್ಕಿದ್ದಾನೆ. ಫೋರ್ಬ್ಸ್ ಪಟ್ಟಿಯ ಪ್ರಕಾರ ಸದ್ಯಕ್ಕೆ ಈ ಜೂನಿಯರ್ ಮೇವೆದರ್‌ನ ನಿವ್ವಳ ಆದಾಯ 42 ಲಕ್ಷ ಕೋಟಿ ಡಾಲರ್ ದಾಟಿದೆ! ಕಳೆದ ನಾಲ್ಕು ವರ್ಷಗಳಿಂದ ಸತತವಾಗಿ 'ವರ್ಷದ ಅತ್ಯಧಿಕ ಆದಾಯ ಗಳಿಸಿದ ಕ್ರೀಡಾಪಟು' ಎಂಬ ದಾಖಲೆಗೆ ಈತ ಪಾತ್ರನಾಗುತ್ತಲೇ ಇದ್ದಾನೆ. ಮೂರು ವಾರಗಳ ಹಿಂದಷ್ಟೇ ಈತ ಡಬ್ಲ್ಯುಬಿಓ ವೆಲ್ಟರ್‌ವೈಟ್ ಚಾಂಪಿಯನ್‌ಶಿಪ್‌ನಲ್ಲಿ ಮ್ಯಾನ್ನಿ ಪಕಾವೋನನ್ನು ರಿಂಗ್‌ನಿಂದ ಹೊರಕ್ಕೆ ತಳ್ಳಿದ್ದು ಒಂದೇ ರಾತ್ರಿಯಲ್ಲಿ 10 ಕೋಟಿ ಡಾಲರ್ ತಂದುಕೊಟ್ಟಿತು. ಈ ಬಾಕ್ಸಿಂಗ್ ಹೋರಾಟ ಇತ್ತೀಚಿನ ವರ್ಷಗಳಲ್ಲೇ ಅತ್ಯಧಿಕ ಆದಾಯ ತಂದ ಹೋರಾಟ ಎಂಬ ಕೀರ್ತಿಗೂ ಪಾತ್ರವಾಗಿದೆ. ಇವರಿಬ್ಬರ ನಡುವಣ ಬಾಕ್ಸಿಂಗ್ ಹೋರಾಟದ ಗೇಟ್‌ಕಲೆಕ್ಷನ್ 730 ಲಕ್ಷ ಡಾಲರ್ ದಾಟಿದ್ದು ಮತ್ತು ಪ್ರಾಯೋಜಕತ್ವದಿಂದ 130 ಲಕ್ಷ ಡಾಲರ್ ಆದಾಯ ಬಂದದ್ದು ಬಾಕ್ಸಿಂಗ್ ಇತಿಹಾಸದಲ್ಲಿ ಹೊಸ ದಾಖಲೆ ಬರೆಯಿತು.

ಆದರೆ ಹೀಗೆ ಚಾಂಪಿಯನ್‌ಪಟ್ಟ ಗೆದ್ದ ಎರಡೇ ವಾರದಲ್ಲಿ ಡಬ್ಲ್ಯುಬಿಓ ಈತನಿಂದ ವೆಲ್ಟರ್‌ವೈಟ್ ಚಾಂಪಿಯನ್ ಪಟ್ಟವನ್ನು ಕಿತ್ತುಕೊಂಡಿದೆ. ಡಬ್ಲ್ಯುಬಿಓ ನಿಯಮಗಳ ಪ್ರಕಾರ ಯಾರೇ ಆದರೂ ಏಕಕಾಲದಲ್ಲಿ ನಾಲ್ಕು ವಿಭಾಗಗಳ ವಿಶ್ವ ಚಾಂಪಿಯನ್ ಪಟ್ಟವನ್ನು ಒಟ್ಟಿಗೇ ಇಟ್ಟುಕೊಳ್ಳುವಂತಿಲ್ಲ. 'ಯಾವುದಾದರೂ ಎರಡು ಪಟ್ಟವನ್ನು ಬಿಟ್ಟುಕೊಡು. ಜತೆಗೆ 2 ಲಕ್ಷ ಡಾಲರ್ ಶುಲ್ಕ ಕಟ್ಟು' ಎಂದು ಈತನಿಗೆ ಸೂಚಿಸಿದರೆ, ಈತ ಕ್ಯಾರೇ ಎಂದಿಲ್ಲ. ಗೆದ್ದಾಗಿದೆ, ಹಣ ಬಂದಿದೆ– ಇನ್ನು ಬೆಲ್ಟ್ ಇಟ್ಟುಕೊಳ್ಳೊದ್ಯಾಕೆ.. ಎನ್ನುವ ಉಡಾಫೆ ಈತನದ್ದು!

5 ಅಡಿ 8 ಇಂಚು ಎತ್ತರದ ಈ ಅಮೆರಿಕನ್ ವೃತ್ತಿಪರ ಬಾಕ್ಸರ್, ಸದ್ಯಕ್ಕೆ ದೇಹತೂಕದ ಐದು ವಿಭಾಗಗಳಲ್ಲೂ ವಿಶ್ವ ಚಾಂಪಿಯನ್ ಎನ್ನಿಸಿಕೊಂಡಿದ್ದಾನೆ. 1996ರ ಒಲಿಂಪಿಕ್ಸ್‌ನಲ್ಲಿ 57 ಕೆಜಿ ತೂಕದ ಫೆದರ್‌ವೈಟ್ ವಿಭಾಗದಲ್ಲಿ ಕಂಚು ಗೆದ್ದ ಬಳಿಕ ವೃತ್ತಿಪರ ಬಾಕ್ಸಿಂಗ್‌ಗೆ ಇಳಿದವನೀತ. ಅಲ್ಲಿಂದ ಇಲ್ಲಿಯವರೆಗೆ ಒಟ್ಟು 48 ವೃತ್ತಿಪರ ಬಾಕ್ಸಿಂಗ್ ಹೋರಾಟ ನಡೆಸಿದ್ದು, ಒಂದರಲ್ಲೂ ಈತನನ್ನು ಸೋಲಿಸಲು ಯಾರಿಗೂ ಆಗಿಲ್ಲ! ಅದಕ್ಕೆ ಕಾರಣ ಈತನ ಹಳೇ ಶೈಲಿಯ ರಕ್ಷಣಾತ್ಮಕ ತಂತ್ರ. ಬಾಕ್ಸಿಂಗ್ ರಿಂಗ್‌ನಲ್ಲಿ ಸದಾ ಬಲಗೈಯನ್ನು ಸ್ವಲ್ಪ ಹೆಚ್ಚೇ ಮೇಲಕ್ಕೆ ಎತ್ತಿ ಹಿಡಿಯುವ ಈತ, ಎದುರಾಳಿ ಎಷ್ಟೇ ಆಕ್ರಮಣ ಮಾಡಿದರೂ ತಣ್ಣಗೇ ಏಟು ತಪ್ಪಿಸಿಕೊಂಡು ತಿರುಗುತ್ತಾನೆ. ಕ್ಷಣಮಾತ್ರದಲ್ಲಿ ಎಡಗೈಯಿಂದ ಎದುರಾಳಿಯ ಪಕ್ಕೆಗೆ ಏಟು ನೀಡುತ್ತಾನೆ. ಈತನ ರಕ್ಷಣಾತ್ಮಕ ಹೋರಾಟದಿಂದಾಗಿಯೇ 'ಅತ್ಯಂತ ಬೋರಿಂಗ್ ಫೈಟರ್' ಎಂಬ ನಾಮಧೇಯವೂ ಈತನಿಗೆ ಸಿಕ್ಕಿದೆ. 'ಈತ ಗೆದ್ದು ಹಣ ಮಾಡುವುದಕ್ಕಾಗಿಯಷ್ಟೇ ಆಡುತ್ತಾನೆ. ಬಾಕ್ಸಿಂಗ್‌ನ ರೋಮಾಂಚಕ ಕ್ಷಣಗಳಿಗಾಗಿ ಅಲ್ಲ' ಎಂದು ಈತನನ್ನು ಟೀಕಿಸುವವರೂ ಇದ್ದಾರೆ.

ಮೇವೆದರ್ ಜೂನಿಯರ್‌ನ ಬಾಲ್ಯ ಅಷ್ಟೇನೂ ಉತ್ತಮವಾಗಿರಲಿಲ್ಲ. ತಂದೆ, ಇಬ್ಬರು ಚಿಕ್ಕಪ್ಪಂದಿರು– ಹೀಗೆ ಮನೆಯಲ್ಲಿ ಎಲ್ಲರೂ ಬಾಕ್ಸರುಗಳೇ. ಬಾಲ್ಯದಲ್ಲಿ ಈತನ ಅಪ್ಪ ಈತನನ್ನು ಪಾರ್ಕ್, ಸಿನಿಮಾ, ಐಸ್‌ಕ್ರೀಮ್ ಪಾರ್ಲರ್ ಎಲ್ಲಿಗೂ ಕರೆದೊಯ್ಯಲಿಲ್ಲ; ಪ್ರತಿದಿನ ತನ್ನ ಜತೆಗೆ ಜಿಮ್‌ಗೆ ಕರೆದೊಯ್ಯುತ್ತಿದ್ದ. ಅಪ್ಪ ಮತ್ತು ಚಿಕ್ಕಪ್ಪನಿಂದಲೇ ಈತ ರಕ್ಷಣಾತ್ಮಕ ಆಟ ಕಲಿತದ್ದು. ಹೈಸ್ಕೂಲ್ ಡ್ರಾಪೌಟ್ ಆದ ಬಳಿಕ, ಬಾಕ್ಸಿಂಗ್ ರಿಂಗೇ ಶಾಲೆಯಾಯಿತು. ಅಮ್ಮ ಮಾದಕ ವ್ಯಸನಿಯಾಗಿದ್ದಳು; ಅದೇ ಚಟದಿಂದಾಗಿಯೇ ಚಿಕ್ಕಮ್ಮ ಎಚ್‌ಐವಿ ಸೋಂಕಿಗೆ ಬಲಿಯಾದಳು. ಈತನೂ ಬಾಲ್ಯದಲ್ಲಿ ಮಾದಕದ್ರವ್ಯಗಳ ಸಹವಾಸ ಮಾಡಿದವನೇ. ಈ ಪರಿಸರ ಸಹಜವಾಗಿಯೇ ಒರಟುತನ ತಂದುಕೊಟ್ಟಿತ್ತು. ವಿಶ್ವ ಚಾಂಪಿಯನ್ ಆದ ಬಳಿಕ, 'ಕೂಡಿಕೆ' ಗೆಳತಿಯ ಜತೆಗೂ ಜಗಳ ಕಾದ. ಆಕೆ ಗೃಹಹಿಂಸೆಯ ಕೇಸ್ ಹಾಕಿದಾಗ, ಎರಡು ತಿಂಗಳು ಜೈಲಿಗೂ ಹೋಗಿ ಬಂದ. ಆದರೆ ಅದ್ಯಾವುದೂ ಈತನ ಬಾಕ್ಸಿಂಗ್ ರಿಂಗ್‌ನ ಜನಪ್ರಿಯತೆಯನ್ನು ಕಡಿಮೆ ಮಾಡಲಿಲ್ಲ. ಸದ್ಯಕ್ಕಂತೂ ಈತ ಬಾಕ್ಸಿಂಗ್ ಜಗತ್ತಿನ ಅತಿದೊಡ್ಡ ಷೋ ಸ್ಟಾಪರ್. ಈತನ ಜತೆಗೆ ಅಂತಿಮ ಹೋರಾಟವೊಂದನ್ನು ಮಾಡಬೇಕೆಂದು ಹಲವು ಬಾಕ್ಸಿಂಗ್ ದಿಗ್ಗಜರು ಸವಾಲು ಹಾಕಿ ಕಾಯುತ್ತಿದ್ದಾರೆ.

ಮುಂದಿನ ಸೆಪ್ಟೆಂಬರ್‌ನಲ್ಲಿ ಇನ್ನೊಂದು ಫೈಟ್‌ಗೆ ಈತ ಸಿದ್ಧನಾಗಬೇಕಿದೆ. ಈಗ ಇರುವ ವಿಶ್ವ ಟೈಟಲ್‌ಗಳನ್ನು ಉಳಿಸಿಕೊಳ್ಳಲು ಅದು ಅನಿವಾರ್ಯ ಕೂಡಾ. ಆ ಎದುರಾಳಿ ಯಾರು ಎನ್ನುವ ಊಹಾಪೋಹ ಜೋರಾಗಿ ನಡೆದಿದೆ. ಕರೀಮ್ ಮೇಹೀಲ್ಡ್, ಆ್ಯಂದ್ರೆ ಬರ್ಟೋ, ಅಮೀರ್ ಖಾನ್, ಮಿಗಿಲ್ ಕೋಟ್ಟೊ ಮುಂತಾದ ದಿಗ್ಗಜರ ಹೆಸರು ಕೇಳಿಬರುತ್ತಿದೆ. 'ನನ್ನನ್ನು ಸೋಲಿಸುವವರು ಯಾರೂ ಇಲ್ಲ. ಆದರೆ ಸೆಪ್ಟೆಂಬರ್‌ನಲ್ಲಿ ನಡೆಯುವುದೇ ನನ್ನ ಕೊನೆಯ ಹೋರಾಟ. ಆ ಬಳಿಕ ನಿವೃತ್ತಿ ಪಡೆಯುತ್ತೇನೆ' ಎಂದು ಮೇವೆದರ್ ಈಗಾಗಲೆ ಘೋಷಿಸಿದ್ದಾನೆ.

ಅಮೆರಿಕದ ನವಶ್ರೀಮಂತರ ಕೋಟೆಯಾದ ಲಾಸ್‌ವೇಗಾಸ್ ಟೌನ್‌ಶಿಪ್‌ನಲ್ಲಿ 22 ಸಾವಿರ ಚದರ ಅಡಿ ವಿಸ್ತೀರ್ಣದ ದೊಡ್ಡ ಬಂಗಲೆಯಲ್ಲಿ ವಾಸಿಸುತ್ತಿರುವ ಮೇವೆದರ್ ಜೂನಿಯರ್‌ಗೆ ಈಗ ಹಣ ಎಂದರೆ ಕಾಲಕಸ. ತನ್ನದೇ ಆದ ಬಾಕ್ಸಿಂಗ್ ಕ್ಲಬ್ ಸ್ಥಾಪಿಸಿ ಯುವಕರಿಗೆ ತರಬೇತಿಯನ್ನೂ ನೀಡುತ್ತಿದ್ದಾನೆ. ಹೊಸ ಕಂಪೆನಿಗಳಿಗೆ ಜಾಹೀರಾತು ನೀಡುವುದನ್ನೂ ನಿಲ್ಲಿಸಿದ್ದಾನೆ. ಹಾಗಿದ್ದೂ ಕಳೆದ ವರ್ಷ ಹಳೇ ಒಪ್ಪಂದದ ಹಬ್ಲಾಟ್, ಫಾಂಡುವಲ್ ಮತ್ತು ಬರ್ಗರ್‌ಕಿಂಗ್ ಕಂಪೆನಿಗಳ ಜಾಹೀರಾತಿನಿಂದಲೇ 150 ಲಕ್ಷ ಡಾಲರ್ ಆದಾಯ ಬಂದಿದೆ. ಈತನ ಅಭಿಮಾನಿಗಳು ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಈತನ ಅಂತಿಮ ಹೋರಾಟಕ್ಕಾಗಿ ಕಾಯುತ್ತಿದ್ದಾರೆ.




Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65